ಶ್ರೀ ಜೆ.ಹೆಚ್.ಪಟೇಲ್: ಕನ್ನಂಬಾಡಿ ಕಟ್ಟೆಯಾಗಲಿ, ಹೇಮಾವತಿಯಾಗಲಿ, ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರು ಹೇಳಿದ ಹಾಗೆ ಕೆಲವು ಕಡೆ ಪೂಜೆ ಮಾಡತಕ್ಕ ಸಂಭ್ರಮದ ವಾತಾವರಣ ಉದ್ಭವವಾಗಿದೆ ಎಂಬುದನ್ನು ಮನಗಂಡಿದ್ದೇವೆ. ಈ ಎಲ್ಲಾ ಸಂಭ್ರಮದಲ್ಲಿ ಕೆಲವರಿಗೆ ಸಂತೋಷದಿಂದ ಕಣ್ಣಲ್ಲಿ ನೀರು ಬಂದರೆ ಕೆಲವರಿಗೆ ಹೊಟ್ಟೆಕಿಚ್ಚಿನಿಂದ ಕಣ್ಣಲ್ಲಿ ನೀರು ಬರುತ್ತದೆ. ಆದ್ದರಿಂದ ಯಾರ ಕಣ್ಣಲ್ಲಿ ಯಾವ ನೀರು ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈಗ ಮದ್ರಾಸಿಗೆ ಹೋಗಿದ್ದಾರೆ. ನಾವು ಹೇಳುವುದಕ್ಕಿಂತ ಮುಂಚೆ ಹೋದರೂ ಹೋದರೆ ಅವರು. ಮಾನ್ಯ ಮುಖ್ಯ ಮಂತ್ರಿಗಳಿಗೆ ಪೂಜೆ ಮಾಡಿಸುವುದರಲ್ಲಿ ಬಹಳ ಆಸಕ್ತಿ ಇದೆ, ಬಂದತಕ್ಷಣ ಹೋಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನನಗೆ ಒಂದು ಅನುಮಾನ ಬಂದಿದೆ. ಅವರಲ್ಲಿ ಕೆಲವರಿಗೆ ಸಂತೋಷಕ್ಕೂ ಕಣ್ಣೀರು ಬಂದಿದೆ ದುಃಖಕ್ಕೂ ಕಣ್ಣೀರು ಬಂದಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕೊಠಡಿಗೆ ಬಂದು ನಮ್ಮ ಗುಲ್ಬರ್ಗ ಜಿಲ್ಲೆಯ ಶಾಸಕರಾದ ದೇವನಾಯಕ್ ಪೆಡಮಗಿಯವರು, ನಾನು ಮುಖ್ಯವಾಗಿ ಶೂನ್ಯವೇಳೆಯಲ್ಲಿ ಅತ್ಯಂತ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿದೆವು. ಈಗ ಸಕ್ಕರೆ ಖಾತೆಯ ಸಚಿವರು ಇದ್ದಾರೆ. ಗುಲ್ಬರ್ಗ ಜಿಲ್ಲೆಯ ಆಳಂದ್ ಸಹಕಾರ ಸಕ್ಕರೆ ಕಾರ್ಖಾನೆಗೆ ಮಾರ್ಚ್ 1995ರಿಂದ ಯಾರು ಕಬ್ಬನ್ನು ಕೊಟ್ಟಿದ್ದಾರೆ...

ಶ್ರೀ ಎಲ್.ಆರ್.ಶಿವರಾಮೇಗೌಡ:- ಶ್ರೀಮತಿ ಪ್ರಮೀಳಾರವರು ಮುಖ್ಯ ಮಂತ್ರಿಗಳು ಬಂದರೆ ಹೊಡೆಯುತ್ತಾರೆಂದು ಹೇಳಿದ್ದಾರೆ. ಅದು ರೆಕಾರ್ಡ್‌ಗೆ ಹೋಗಿದೆ. ದಯವಿಟ್ಟು ಅದನ್ನು ಎಕ್ಸ್‌ಪಂಜ್ ಮಾಡಿ.

ಅಧ್ಯಕ್ಷರು:- ಈಗಾಗಲೇ ಹೇಳಿದ್ದೀರಲ್ಲ. ನಾನು ರೆಕಾರ್ಡ್ ತರಿಸಿ ನೋಡುತ್ತೇನೆ. ಹೊಡೆಯಬೇಕೇ ಬೇಡವೇ ಎಂದು ನಾನು ನೋಡುತ್ತೇನೆ. ನೀವು ಹೇಳಿ ಯಡಿಯೂರಪ್ಪನವರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:- ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಬಾಕಿ

+ಶ್ರೀ ಬಿ.ಎಸ್.ಯಡಿಯೂರಪ್ಪ:- ಗುಲ್ಬರ್ಗ ಜಿಲ್ಲೆಯ ಆಳಂದ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಮಾರ್ಚಿ 1995 ರಿಂದ ಯಾರು ರೈತರು ಕಬ್ಬನ್ನು ಕೊಟ್ಟಿದ್ದಾರೆ ಅವರಿಗೆ ಈವರೆಗೆ ಹಣವನ್ನು ಪಾವತಿ ಮಾಡಿಲ್ಲ. ಒಂದು ಅಂದಾಜಿನ ಪ್ರಕಾರ ಸುಮಾರು 5 ಕೋಟಿ ರೂಪಾಯಿ ಬಾಕಿ ಇದೆ ಎಂದು ನಮಗೆ ಗೊತ್ತಾಗಿದೆ. 21-8-95 ರಿಂದ ನಿರಂತರವಾಗಿ ಧರಣಿ ಸತ್ಯಾಗ್ರಹ ಮಾಡಿದ್ದರೂ ಯಾರೂ ಹೋಗಿ ಸಮಸ್ಯೆಯನ್ನು ಬಗೆಹರಿಸುವಂಥ ಪ್ರಯತ್ನವನ್ನು ಮಾಡಿಲ್ಲ. 1-9-95 ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಅಲ್ಲಿ ಪ್ರಾರಂಭ ಮಾಡಿದ್ದಾರೆ. ದುಃಖ ತರುವಂಥ ಸಂಗತಿ ಅಂದರೆ, ಯಾವ ರೈತ ಕೊಟ್ಟಂಥ ಕಬ್ಬಿನಿಂದ ಸಕ್ಕರೆ ಮಾಡಿ ಆ ಸಕ್ಕರೆಯನ್ನು ಮಾರಿಕೊಂಡಿದ್ದಾನೆ ಆ ಸಕ್ಕರೆ ಕಾರ್ಖಾನೆ ಮಾಲೀಕ. 5 ತಿಂಗಳು ಕಳೆದಿದೆ. ಆ ದುಡ್ಡನ್ನು ಕೊಡದೇ ಇದ್ದರೆ ರೈತನ ಪರಿಸ್ಥಿತಿ ಎಲ್ಲಿಗೆ ಹೋಗಬಹುದು, ಅವನು ಏನಾಗಬಹುದು ಎನ್ನುವುದನ್ನು ಚಿಂತನೆ ಮಾಡದೆ ಇವತ್ತು ಧರಣಿ, ಉಪವಾಸ ಆಗುತ್ತಿದ್ದರೂ ಸಹ ಸರ್ಕಾರ ಹೋಗಿಲ್ಲ. ಆ ಕಾರ್ಖಾನೆಯವರು ಬಂದಿಲ್ಲ. ಅಂದರೆ ಯಾವರೀತಿ ರೈತ ಒಂದು

ರೀತಿ ಸಂಕಷ್ಟಕ್ಕೆ ಸಿಕ್ಕುತ್ತಿದ್ದಾನೆ, ಅವನಿಗೆ ಹೇಳುವವರು ಕೇಳುವವರು ಯಾರೂ ಇಲ್ಲದಂಥ ಒಂದು ಪರಿಸ್ಥಿತಿ ಬಂದಿದೆ. ಇದು ಕೇವಲ ಅಳಂದದಲ್ಲಿ ಮಾತ್ರ ಅಲ್ಲ, ಬೀದರ್‌ನಲ್ಲಾಯಿತು. ಬೇರೆ ಬೇರೆ ಜಿಲ್ಲೆಯಲ್ಲಿ ಸಮಸ್ಯೆ ಇದೆ. ದಯಮಾಡಿ ಆ ಉಪವಾಸ, ಧರಣಿ ಸತ್ಯಾಗ್ರಹ ಸುದ್ದಿ ನಿಮಗೆ ಮುಟ್ಟಿದ್ದರೆ ಇವತ್ತು ಏತಕ್ಕೆ ಆ ಕಡೆ ಗಮನ ಕೊಡಲಿಲ್ಲ? ಆ ಸಕ್ಕರೆ ಕಾರ್ಖಾನೆ ಮಾಲೀಕರು ಬಂದು ಇಲ್ಲಿ ಕಾರ್ಖಾನೆ ಮಾಡಿಕೊಂಡು ಕಬ್ಬನ್ನು ಅರೆದು ಆ ದುಡ್ಡನ್ನು ಬೇರೆಕಡೆ ಕಳುಹಿಸಿಕೊಟ್ಟು ಆ ಕಾರ್ಖಾನೆ ಮುಚ್ಚುವಂಥ ಸ್ಥಿತಿಗೂ ಅನೇಕ ಕಡೆ ಬಂದಿರುವುದು ನಿಮ್ಮ ಗಮನಕ್ಕೆ ಬಂದಿದೆ. ನೀವೇ ಉತ್ತರವನ್ನೂ ಕೊಟ್ಟಿದ್ದೀರಿ. ದಯಮಾಡಿ ಈಗ ಇನ್ನು ಮೂರು ನಾಲ್ಕು ದಿವಸದೊಳಗಾಗಿ ಕೊಡಬೇಕಾದ ಆ ಬಾಕಿ ಹಣವನ್ನು ರೈತರಿಗೆ ಪಾವತಿ ಮಾಡಿ ಆ ಉಪವಾಸ, ಧರಣಿ ಸತ್ಯಾಗ್ರಹ ನಿಲ್ಲುವಂತೆ ಏನಾದರೂ ಪ್ರಯತ್ನ ಮಾಡುತ್ತೀರೋ ಅಥವಾ ಇದುವರೆಗೆ ಈ ರೈತರನ್ನು ನಿರ್ಲಕ್ಷ್ಯ ಮಾಡುವುದಕ್ಕೆ ಕಾರಣ ಏನು? ದಯಮಾಡಿ ಈ ಬಗ್ಗೆ ಸ್ಪಷ್ಟೀಕರಣ ತಾವು ನೀಡಿದರೆ ನಾನು ಆಮೇಲೆ ಉಪಪ್ರಶ್ನೆ ಕೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ರೇವುನಾಯಕ್ ಬೆಳಮಾಗಿ (ಕಮಾಲಾಪುರ):- ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಆಳಂದ್ ತಾಲ್ಲೂಕಿನಲ್ಲಿ ಬೂದನೂರು ಸಕ್ಕರೆ ಕಾರ್ಖಾನೆ ಇದೆ. ಅಲ್ಲಿ ಆಗಸ್ಟ್ 21ರಿಂದ 31 ರವರೆಗೆ ರೈತರು ಮತ್ತು ಬಿ.ಜೆ.ಪಿ. ಕಾರ್ಯಕರ್ತರು ಸ್ಟೈಕನ್ನು ಹೂಡಿದ್ದಾರೆ. ಆದರೆ ಇಲ್ಲಿಯವರೆಗೆ ಯಾವ ಅಧಿಕಾರಿಯೂ ಅಲ್ಲಿ ಬಂದಿಲ್ಲ. ಸಂಬಂಧಪಟ್ಟವರು ಅದರ ವಿಚಾರಣೆಯನ್ನೂ ಮಾಡಿಲ್ಲ. ಈಗ ಒಂದನೇ ತಾರೀಕಿನಿಂದ ಇಲ್ಲಿಯವರೆಗೆ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನನಗೆ ಈಗ ಅನ್ನಿಸುತ್ತಾ ಇದೆ, ರೈತರ ಪರ ಜನತಾ ದಳದ ಸರ್ಕಾರ ಬಂದಿದೆ. ಆದರೆ ರೈತರ ಪರ ಯಾವ ಕೆಲಸ ಆಗುತ್ತಾ ಇಲ್ಲ ಎಂಬ ನನ್ನ ಭಾವನೆ ವ್ಯಕ್ತಪಡಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಕ್ಷೇತ್ರಕ್ಕೆ ಹೋದಾಗ ರೈತರು ನನ್ನನ್ನು ಘೇರಾವೊ ಮಾಡಿ ನಮ್ಮ ಪಾಲಿಗೆ ನೀವು ಶಾಸಕರಾಗಿದ್ದೀರೋ ಇಲ್ಲವೋ ಎಂಬ ಪ್ರಶ್ನೆಯನ್ನು ಹಾಕುತ್ತಿದ್ದಾರೆ. ನಮ್ಮ ಜಿಲ್ಲೆಯ ಸನ್ಮಾನ್ಯ ಉಸ್ತುವಾರಿ ಸಚಿವರಿದ್ದಾರೆ. ಅವರ ಸಹಕಾರಕ್ಕೋಸ್ಕರ ಪೋಲೀಸ್ ಬಂದೋಬಸ್ತ್ ಇದೆ. ಆದ್ದರಿಂದ ಅವರಿಗೆ ಯಾರೂ ಕೇಳುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಮುಗ್ಧ ಎಂ.ಎಲ್.ಎ.ಆಗಿ ನನ್ನ ಕ್ಷೇತ್ರಕ್ಕೆ ಹೋಗುವುದಕ್ಕೆ ನನಗೆ ಭಯ ಬರುತ್ತಿದೆ. ಅಲ್ಲಿ ರೈತರು ಸಾಕಷ್ಟು ಕಂಗಾಲಾಗಿದ್ದಾರೆ. ಮಾರ್ಚ್ ಕೊನೆಯವರೆಗೆ ನಮ್ಮ ರೈತರು ಕಬ್ಬು ಹಾಕಿದ್ದಾರೆ. ಆ ಕಬ್ಬಿನ ಹಣ ಮರುಪಾವತಿ ಇಲ್ಲಿಯವರೆಗೆ ಆಗಿಲ್ಲ. ಸಂಬಂಧಪಟ್ಟ ಅಧಿಕಾರಿಯನ್ನು ಭೇಟಿ ಆದಾಗ 10 ಕೋಟಿ ರೂಪಾಯಿನ ಸಕ್ಕರೆ ಇದೆ ಆದರೆ ಸರ್ಕಾರ ನಮಗೆ ಪರ್ಮಿಷನ್ ಕೊಟ್ಟಿಲ್ಲ ಸರ್ಕಾರ ನಮಗೆ ಪರ್ಮಿಷನ್ ಕೊಟ್ಟಿದ್ದರೆ ರೈತರಿಗೆ ಹಣ ಮರುಪಾವತಿ ಮಾಡುತ್ತಿದ್ದೆವು ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ರೈತರ ಕಷ್ಟ, ರೈತರ ನೋವು ನನಗೆ ಈಗ ಅನ್ನಿಸುತ್ತಿದೆ ಈ ಸದನದಲ್ಲಿ ಹೆಚ್ಚಾಗಿ ರೈತರ ಪರ ಯಾರೂ ಇಲ್ಲ ಎಂದು ನಾನು ಭಾವಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಅಧ್ಯಕ್ಷರೆ, ಈ ತರಹ ರೈತರ ಪರ ಯಾರೂ ಇಲ್ಲ ಎಂದರೆ ಹೇಗೆ?

ಅಧ್ಯಕ್ಷರು:- ಅವರು ಹೊಸ ಸದಸ್ಯರಿದ್ದಾರೆ; ಇರಲಿ ನೀವೆಲ್ಲಾ ರೈತರ ಪರ ಎಂದು ಗೊತ್ತಿದೆ. ಅವರು ಹೊಸ ಸದಸ್ಯರು. ಪಾಪ ಏನೋ ಹೇಳುತ್ತಿದ್ದಾರೆ.

ಶ್ರೀ ರೇವುನಾಯಕ್ ಬೆಳಮಾಗಿ:- ನಾನು ಹೊಸದಾಗಿ ಇದ್ದೇನೆ. ಬಹಳ ನೊಂದು

ಮಾತನಾಡುತ್ತಿದ್ದೇನೆ. ಏಕೆಂದರೆ ರೈತರ ನೋವು, ರೈತರ ಕಷ್ಟ ಗೊತ್ತು. ಅವರು 12 ತಿಂಗಳು ಕೆಲಸ ಮಾಡಬೇಕಾಗುತ್ತದೆ. ಕಸ ಹೊಡೆಯಬೇಕಾಗುತ್ತದೆ. ಬಹಳ ಆತುರದಲ್ಲಿ ಕೆಲಸ ಮಾಡಬೇಕಾಗುತ್ತದೆ. ಏನೋ ವರ್ಷದಲ್ಲಿ ಒಂದೇ ಸಾರಿ ಅವರಿಗೆ ನೋಟ್ ಕಾಣಿಸುವುದು. ಸನ್ಮಾನ್ಯ ಅಧ್ಯಕ್ಷರೇ, ನಾವು ಶಾಸಕರಿರಬಹುದು, ಮಂತ್ರಿಗಳಿರಬಹುದು, ತಿಂಗಳಾದರೆ ನಾವು ಪಗಾರ ತೆಗೆದುಕೊಳ್ಳುತ್ತೇವೆ. ಆದರೆ ರೈತರು ಇವತ್ತು ಒಂದು ವರ್ಷದ ಮೇಲೆ ಒಂದು ನೋಟನ್ನು ಕಾಣುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಹೇಳುವುದಿಲ್ಲ. ಆದರೆ ಈ ಕಬ್ಬನ್ನು ಕೊಟ್ಟ ರೈತರಿಗೆ ಹಣ ಮರುಪಾವತಿ ಯಾವಾಗ ಮಾಡುತ್ತೀರಿ ಎಂಬುದನ್ನು ಖಡಾಖಂಡಿತವಾಗಿ ಹೇಳಬೇಕು. ಏಕೆಂದರೆ ನನ್ನ ಕ್ಷೇತ್ರದಲ್ಲಿ ಹೋದರೆ ನನಗೆ ಅನುಮಾನ ಬರುತ್ತಿದೆ. ನನಗೆ ಮುತ್ತಿಗೆ ಹಾಕುತ್ತಿದ್ದಾರೆ. ನಾನು ಹೋದರೆ ಬಹಳ ಭಯ ಬರುತ್ತಿದೆ. ನನ್ನ ಗೌರವ ಕಾಪಾಡಿ. ನಿಮ್ಮ ಗೌರವವನ್ನು ಕಾಪಡಿಕೊಳ್ಳಿ. ಈ ಬಗ್ಗೆ ಖಡಾಖಂಡಿತವಾಗಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್ (ಜವಳಿ, ಸಕ್ಕರೆ ಮತ್ತು ಪರಿಸರ ಖಾತೆ ರಾಜ್ಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾಗಲೀ, ನಮ್ಮ ಶಾಸಕರಾಗಲೀ ಆಳಂದ್ ಸಕ್ಕರೆ ಕಾರ್ಖಾನೆ ಬಗ್ಗೆ ಹಲವಾರು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈಗಾಗಲೇ ನಾನು ಒಂದು ಪತ್ರವನ್ನು ಕೂಡ ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿದ್ದೇನೆ. ಆಳಂದ್ ಸಕ್ಕರೆ ಕಾರ್ಖಾನೆಯಲ್ಲಿ 12 ಕೋಟಿ ರೂಪಾಯಿ ಸಕ್ಕರೆ ದಾಸ್ತಾನು ಇದೆ. 10 ಕೋಟಿ ಅಲ್ಲ 12 ಕೋಟಿ ರೂಪಾಯಿ ದಾಸ್ತಾನಿದೆ. ರೈತರಿಗೆ ಬಾಕಿ ಕೊಡಬೇಕಾದದ್ದು ನಿಜ. ಸನ್ಮಾನ್ಯ ಅಧ್ಯಕ್ಷರೆ ಏನಾಗಿದೆ ಎಂದರೆ ಶುಗರ್ ಕಂಟ್ರೋಲ್ ಆಕ್ಟ್‌ನಲ್ಲಿ ನಮ್ಮ ರಾಜ್ಯಕ್ಕೆ ಏನೂ ಅಧಿಕಾರ ಇಲ್ಲ. ಲೆವಿ ಸಕ್ಕರೆ ಇರಬಹುದು, ಮಾರ್ಕೆಟ್ ಮಾಡತಕ್ಕ ಸಕ್ಕರೆ ಇರಬಹುದು. ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಸಕ್ಕರೆ ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಇದು ರಾಜ್ಯದ ಸಂಪೂರ್ಣವಾದ ಸಕ್ಕರೆ ಕಾರ್ಖಾನೆ. ಮತ್ತು ಈಗ ಆ ಸಕ್ಕರೆ ಕಾರ್ಖಾನೆಯಲ್ಲಿ ಕೂಡ ಸರಿಯಾದ ಆಡಳಿತ ಇಲ್ಲ. ಅದಕ್ಕಾಗಿ ನಾನು ಈಗಾಗಲೇ ವಿಚಾರ ಮಾಡಿದ್ದೇನೆ, ಆ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯನ್ನು ರದ್ದು ಮಾಡಿ ಜಿಲ್ಲಾಧಿಕಾರಿಗಳನ್ನು ಅಡ್ಮಿನಿಸ್ಟ್ರೇಟರ್ ಎಂದು ನಾನು ನೇಮಿಸಿದ್ದೇನೆ. ಈಗ ಕೂಡ ರೈತರಿಗೆ ಕೊಡತಕ್ಕ ಬಾಕಿಯನ್ನು ಸಕ್ಕರೆ ಮಾಡಿದ ತಕ್ಷಣ ಸಾಧ್ಯವಾದಷ್ಟು ಬೇಗನೆ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಈ ಚಳುವಳಿ ಮಾಡಲಿಕ್ಕೆ ನನ್ನದೇನೂ ಇಲ್ಲ. ಗಾಂಧೀಜಿಯವರು ಹೇಳಿದ್ದಾರೆ, ಅದರಂತೆ ಮಾಡಿದ್ದಾರೆ. ಈ ಸಹಕಾರಿ ಸಂಘದಲ್ಲಿ ಏನಾಗಿದೆ ಇಡೀ ರಾಜ್ಯದ ತುಂಬ ಅಂದರೆ ಇವರೇ ಡೈರಕ್ಟರ್ ಛೇರ್ಮನ್ ಇರುವುದು, ಅದನ್ನೆಲ್ಲಾ ಯಾವರೀತಿ ಹಾಳು ಮಾಡಬೇಕೋ ಮಾಡಿಬಿಡುವುದು, ಚಳುವಳಿ ಮಾಡುವುದು, ಇದು ವ್ಯವಸ್ಥೆಯಾಗಿಬಿಟ್ಟದೆ. ಯಾವ ಪಕ್ಷ ಆಗಲಿ, ಅದು ಕಾಂಗ್ರೆಸ್ ಇರಲಿ, ಜನತಾ ದಳ ಇರಲಿ, ಬಿ.ಜೆ.ಪಿ.ಇರಲಿ. ಇದಕ್ಕೆ ಈ ಸರ್ಕಾರ ಬಿಡಲಿಲ್ಲ. ಈಗಾಗಲೇ ಬೀದರ್ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಂತೆ ಸಿ.ಒ.ಡಿ. ಎನ್‌ಕ್ವೈರಿ ಮಾಡಿದ್ದೇವೆ. ಇದರ ಹಣೆಬರಹ ಏನಾಗುತ್ತದೋ ನೋಡೋಣ. ಇದರ ಬಗ್ಗೆಯೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಾವು ಸಿ.ಒ.ಡಿ. ತನಿಖೆ ಮಾಡಿ, ಅದನ್ನು ಮುಚ್ಚಿಸಿ. ಅವನು ಯಾರು ಲೂಟಿ ಮಾಡಿದ್ದಾನೆ ಅವನನ್ನು ಜೈಲಿಗೆ ಕಳುಹಿಸಿ, ನಮ್ಮ ಅಭ್ಯಂತರ ಇಲ್ಲ.

ನಮ್ಮ ಪ್ರಶ್ನೆ ನೇರವಾಗಿ ಇಷ್ಟೆ. ತಾವೇ ಒಪ್ಪಿಕೊಂಡ ಪ್ರಕಾರ 12 ಕೋಟಿ ರೂಪಾಯಿ ಬೆಲೆ ಬಾಳುವಂಥ ಸಕ್ಕರೆ ಇದೆ. ನನಗೆ ಗೊತ್ತಿರುವ ಪ್ರಕಾರ ಆ ಸಕ್ಕರೆಯನ್ನು ಗೋಡೌನ್‌ನಲ್ಲಿಟ್ಟು ಬ್ಯಾಂಕಿನಿಂದ ದುಡ್ಡು ತೆಗೆದುಕೊಂಡಿರುತ್ತೀರಿ. ಇದು ನಮಗೆ ಸಂಬಂಧ ಇಲ್ಲ. ನಮ್ಮ ರೈತ ಕಬ್ಬು ಕೊಟ್ಟು 5 ತಿಂಗಳಾಗಿದೆ., ತಕ್ಷಣ ಈಗಲಾದರೂ ನಾಲ್ಕಾರು ದಿವಸದಲ್ಲಿ ಸಕ್ಕರೆ ಮಾರಿ ಕೊಡುತ್ತೀರೋ ಅಥವಾ ಸಕ್ಕರೆ ಕಾರ್ಖಾನೆ ಮಾರಿ ಕೊಡುತ್ತೀರೋ ನನಗೆ ಗೊತ್ತಿಲ್ಲ. ರೈತರಿಗೆ ಹಣ ಪಾವತಿ ಮಾಡುವ ಜವಾಬ್ದಾರಿ ತೆಗೆದುಕೊಳ್ಳಿ. ತಪ್ಪು ಮಾಡಿರುವವರ ಬಗ್ಗೆ ಏನು ಬೇಕಾದರೂ ಕಾನೂನು ಕ್ರಮ ತೆಗೆದುಕೊಳ್ಳಿ. ನಮಗೆ ಇದರ ಬಗ್ಗೆ ನೇರವಾದ ಉತ್ತರ ಬೇಕು. ನೀವು ಇನ್ನು ಒಂದೆರಡು ತಿಂಗಳಲ್ಲಿ ಸಕ್ಕರೆ ಮಾರಿ ಕೊಡುತ್ತೇವೆ ಎಂದರೆ ಅಷ್ಟು ಹೊತ್ತಿಗೆ ರೈತ ನೆಲಸಮ ಆಗುತ್ತಾನೆ. ಬಹುಶಃ ಆ ಒಂದು ಆಕ್ರೋಶಕ್ಕೆ ತುತ್ತಾಗುತ್ತೀರಿ. ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿಗೆ ಅವಕಾಶ ಮಾಡಿಕೊಡಬೇಡಿ. ನಿಮ್ಮ ಬಗ್ಗೆ ವಿಶ್ವಾಸ ಇದೆ. ರೈತರ ಬಗ್ಗೆ ಬೀದರ್‌ನಲ್ಲಿ ಬಹಳ ದಿಟ್ಟ ನಿಲುವು ತೆಗೆದುಕೊಂಡಿದ್ದೀರಿ. ಈಗಲಾದರೂ ಯಡಿಯೂರಪ್ಪನವರೆ, ನಾಲ್ಕೈದು ದಿವಸದಲ್ಲಿ ಕಬ್ಬು ಕೊಟ್ಟಿರುವವರಿಗೆ ಹಣ ಪಾವತಿ ಮಾಡುವ ವ್ಯವಸ್ಥೆ ಮಾಡುತ್ತೇವೆ ಎಂದು ನೇರವಾಗಿ ಒಂದು ಉತ್ತರವನ್ನು ತಾವು ದಯಮಾಡಿ ಕೊಡಬೇಕು.

ಶ್ರೀ ಪಿ.ಸಿ.ಸಿದ್ದನಗೌಡರ್:- ಮಾನ್ಯ ಸಭಾದ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸುಮಾರು 600 ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನಿದೆ, ರಿಲೀಸ್ ಮಾಡಿ ಎಂದು ನಾನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ ನಾನು ಭೇಟಿಯಾಗಿದ್ದೇನೆ. ಕೇಂದ್ರ ಸರ್ಕಾರಕ್ಕೆ ಒತ್ತಾಯ ತರುತ್ತೇನೆ. ತಾವು ಸಕ್ಕರೆ ದಾಸ್ತಾನಿನಲ್ಲಿ ಬ್ಯಾಂಕಿನಿಂದ ಲೋನ್ ತೆಗೆದುಕೊಂಡಿದ್ದೀರಿ ಎಂದು ಹೇಳಿದ್ದೀರಿ. ಲೋನ್ ತೆಗೆದುಕೊಂಡರೂ ಕೂಡ ಅದು ಸಕ್ಕರೆ ಕಾರ್ಖಾನೆಯ ವ್ಯವಹಾರಕ್ಕೆ ಮಾತ್ರ ಖರ್ಚು ಮಾಡುತ್ತಾರೆ. ಆದರೆ ಕೊಡತಕ್ಕ ಬಾಕಿ ಇದೆಯಲ್ಲ ಅದನ್ನು ತೀವ್ರ ಗತಿಯಲ್ಲಿ ಕೊಡಲಿಕ್ಕೆ ಹೇಳುತ್ತೇನೆ. ಎರಡು ಮೂರು ದಿವಸದಲ್ಲಿ ಎಂದು ತಾವು ಕಂಡೀಷನ್ ಹಾಕಿದರೆ ಆಗುವುದಿಲ್ಲ. ಇಷ್ಟು ದಿನದಲ್ಲಿ ಎಂದು ನನಗೆ ಹೇಳುವುದಕ್ಕಾಗುವುದಿಲ್ಲ. ಇದು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ. ಆದಷ್ಟು ತೀವ್ರವಾಗಿ ಮಾಡುತ್ತೇವೆ. ಸಾಧ್ಯವಾದಷ್ಟು ಬೇಗ ಕೊಡುತ್ತೇವೆ.

ಶ್ರೀಮತಿ ಎಸ್.ಪ್ರಮೀಳಾ:- ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹೇಳಬೇಕು. ರೈತರು ಅಲ್ಲಿ ಸಾಯುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ವಾಮಿ, ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ರೈತ ಏನು ತಪ್ಪು ಮಾಡಿದ್ದಾನೆ ಸ್ವಾಮಿ? ಕಬ್ಬು ಕೊಟ್ಟು ಆರು ತಿಂಗಳಾಗಿದೆ. ಒಂದು ತಿಂಗಳಿಂದ ಧರಣಿ ಮಾಡುತ್ತಿದ್ದಾರೆ. ಪಕ್ಷಭೇಧ ಮರೆತು ಹೇಗಾದರೂ ಬೇರೆ ವ್ಯವಸ್ಥೆ ಮಾಡಿ. ಸಕ್ಕರೆ ಹೇಗೂ ದಾಸ್ತಾನಿದೆ. ಬೇರೆ ವ್ಯವಸ್ಥೆ ಮಾಡಿ. ರೈತರಿಗೆ ಅರ್ಧವಾದರೂ ಕೊಟ್ಟು ಇನ್ನು ಮಿಕ್ಕಿದ್ದನ್ನು ಒಂದು ತಿಂಗಳು ಬಿಟ್ಟು ಕೊಡುತ್ತೇವೆ ಎಂದಾದರೂ ಹೇಳಲಿ.

ಶ್ರೀ ಪಿ.ಸಿ.ಸಿದ್ದನಗೌಡರ್:- ಮಾನ್ಯ ಅಧ್ಯಕ್ಷರೆ, ಮಲಾಸಿಸ್ ಆಗಲಿ ಸಕ್ಕರೆ ಆಗಲೀ ರೇಟ್ ಆಗಿದೆ. ಸಕ್ಕರೆ ಕಾರ್ಖಾನೆ ಪ್ರತಿವರ್ಷದಂತೆ ಇಲ್ಲ. ಆದರೆ ವಿರೋಧಪಕ್ಷದ ನಾಯಕರು ಹಾಗೂ ಸದಸ್ಯರು ಹೇಳತಕ್ಕ ವಿಷಯದಲ್ಲಿ ತೀವ್ರಗತಿಯಲ್ಲಿ ಅತೀ ಜರೂರಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ

ನಾನು ಪ್ರಯತ್ನ ಮಾಡುತ್ತೇನೆಂಬ ಮಾತನ್ನು ತಮ್ಮ ಮುಖಾಂತರ ಹೇಳುತ್ತೇನೆ.

12.20 ಪಿ.ಎಂ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈಗಾಗಲೇ ಉಪವಾಸ ಸತ್ಯಾಗ್ರಹ ಮಾಡಿ ಒಂದು ತಿಂಗಳು ಆಗಿದೆ. ಒಂದು ತೀರ್ಮಾನವನ್ನು ಅವರಿಗೆ ಕೊಟ್ಟರೆ ಅವರು ಮೇಲೆ ಏಳುವುದಕ್ಕೆ ಅವಕಾಶ ಆಗುತ್ತದೆ.

ಶ್ರೀ ಸುಭಾಷ್ ಆರ್.ಗುತ್ತೇದಾರ್:- ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳುವ ವಿಷಯಕ್ಕೆ ಗಮನಕೊಡಬೇಕು. ಸಕ್ಕರೆ ಸಚಿವರು ಯಾವ ದಿವಸ ಕೊಡುತ್ತಾರೆಂದು ಖಚಿತವಾಗಿ ಹೇಳಬೇಕು. ನನ್ನ ಕ್ಷೇತ್ರದಲ್ಲಿ ನಮ್ಮ ರೈತರಿಗೆ ಹೇಳಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾನು ನನ್ನ ಕ್ಷೇತ್ರಕ್ಕೆ ಹೋಗಲಿಕ್ಕೆ ಭಯಪಡುತ್ತಾ ಇದ್ದೇನೆ. ಆದ್ದರಿಂದ ಸಚಿವರು ಎಷ್ಟು ದಿವಸದಲ್ಲಿ ಕೊಡುತ್ತಾರೆಂದು ಖಚಿತವಾಗಿ ನನಗೆ ಹೇಳಬೇಕು.

ಅಧ್ಯಕ್ಷರು:- ತಾವು ತಕ್ಷಣ ಸರ್ಕಾರದ ಜೊತೆ, ನಿಮ್ಮ ನಾಯಕರ ಜೊತೆಗೆ ಚರ್ಚೆ ಮಾಡಿ ಆದಷ್ಟು ಬೇಗ ಅದಕ್ಕೆ ಪರಿಹಾರ ಕಂಡುಹಿಡಿಯತಕ್ಕ ವ್ಯವಸ್ಥೆ ಮಾಡಬೇಕು. ಒಂದು ಕಡೆ ಅಲ್ಲಿ ಹೋರಾಟ ನಡೆಯುತ್ತಿದೆ. ಪಾಪ ಶಾಸಕರು ಅಷ್ಟೊಂದು ದುಃಖದಿಂದ ಹೇಳಿದರು. ಸಾಧ್ಯವಾದಷ್ಟು ಮಟ್ಟಿಗೆ ಇದನ್ನು ಮುಂದುವರಿಯುವುದಕ್ಕೆ ಬಿಡಬೇಡಿ. ಆದಷ್ಟು ಬೇಗ ಪ್ರಾಮಾಣಿಕತೆಯಿಂದ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಇವತ್ತೆ ಎತ್ತಿದ್ದು ಅಲ್ಲ. ನನಗೆ ಗೊತ್ತಿದೆ. ವಿರೋಧ ಪಕ್ಷದ ನಾಯಕರು ನೋ ಕಾನ್‌ಫಿಡೆನ್ಸ್ ಮೋಶನ್ ತಂದ ಸಂದರ್ಭದಲ್ಲಿ ನಾನು ಮಾತನಾಡುವಾಗ ಈ ಪ್ರಶ್ನೆಯನ್ನು ಕೂಡ ಎತ್ತಿ ಇದರ ಬಗ್ಗೆ ಕೇಳಿದ್ದೆ. ಆ ಸಂದರ್ಭದಲ್ಲಿ ಸಚಿವರು ತಕ್ಷಣ 15 ದಿವಸದಲ್ಲಿ ಮಾಡುತ್ತೇವೆಂದು ಹೇಳಿದರು. ಹಾಗೆ ಹೇಳಿ ಸುಮಾರು ಒಂದು ತಿಂಗಳು ಆಯಿತು.

ಶ್ರೀ ಕೆ.ಎನ್.ನಾಗೇಗೌಡ:- ನರಸಿಂಹ ರಾವ್‌ರವರಿಗೆ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನರಸಿಂಹರಾವ್‌ರವರಿಗೆ ಹೇಳುವುದನ್ನು ಹೇಳೋಣ ಮೊದಲು ನೀವು ಕಬ್ಬು ತೆಗೆದುಕೊಂಡಿದ್ದಕ್ಕೆ ದುಡ್ಡು ಕೊಡಿ.

ಅಧ್ಯಕ್ಷರು:- ಮಾನ್ಯ ಖರ್ಗೆಯವರೆ, ನೀವು ಒಂದು ವೇಳೆ ನರಸಿಂಹರಾಯರ ಹತ್ತಿರಕ್ಕೆ ಹೋದರೆ ನಾಗೇಗೌಡರನ್ನು ಕರೆದುಕೊಂಡು ಹೋಗಿ. ಇವರೂ ಪರಿಚಯದವರು ತಾನೇ ಅವರಿಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ರೈತರು ಏನು ಅಪರಾಧ ಮಾಡಿದ್ದಾರೆ? ಕಬ್ಬು ಕೊಟ್ಟು 5 ತಿಂಗಳು ಆಗಿದೆ. ಸಕ್ಕರೆ ಮಾಡಿಯಾಗಿದೆ. ಇಲ್ಲಿ ಉಪಮುಖ್ಯಮಂತ್ರಿಗಳು ಇದ್ದಾರೆ. ಅವರಾದರೂ ಹೇಳಬೇಕಲ್ಲ. ಇದೇ ರೀತಿ ಸಂದರ್ಭ ಬಂದಾಗ ನಮ್ಮ ಜಾಗದಲ್ಲಿ ನೀವು ಇದ್ದರೆ ಏನು ಮಾಡುತ್ತೀರಿ ಹೇಳಿ.

ಶ್ರೀ ಜೆ.ಹಚ್.ಪಟೀಲ್: ನಾವು ಸಹ ಕಬ್ಬು ಕೊಟ್ಟವರೇ, ಸಕ್ಕರೆ ಮಾಡಿಸಿದವರೇ. ಮಾನ್ಯ ಸಚಿವರು ಏನು ಹೇಳಿದರು ಎಂದರೆ ಅಲ್ಲಿರುವುದು ಎರಡು ಸಾಧ್ಯತೆ. ತಾಂತ್ರಿಕವಾಗಿ ಕೇಂದ್ರ ಸರ್ಕಾರದವರು ರಿಲೀಸ್ ಮಾಡಬೇಕು. ರಿಲೀಸ್ ಮಾಡಿದ ಮೇಲೆ ಸಕ್ಕರೆ ಮಾರಾಟ

ಮಾಡಬೇಕು. ನೀವು ಸಕ್ಕರೆಯನ್ನಾದರೂ ಮಾರಾಟ ಮಾಡಿ, ಫ್ಯಾಕ್ಟರಿಯನ್ನಾದರೂ ಮಾರಾಟ ಮಾಡಿ ನಮಗೆ ಇಷ್ಟು ದಿವಸದಲ್ಲಿ ಕೊಡುತ್ತೇವೆ ಎಂದು ಹೇಳಿ ಎಂದು ಕೇಳಿದರೆ ಹಾಗೆ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ರೈತರ ಬಗ್ಗೆ ತಾವು ಹೇಳಿದಿರಿ, ಸರ್ಕಾರಕ್ಕೂ ಅವರ ಬಗ್ಗೆ ಕಳಕಳಿಯಿದೆ. ನಾವು ಅವರ ಸಮಸ್ಯೆಯನ್ನು 15 ದಿವಸದಲ್ಲಿ ಮಾಡಬಹುದು ಅಥವಾ ಒಂದು ವಾರದಲ್ಲಿ ಮಾಡಬಹುದು. ಆದರೆ ಅದು ಆಗಬೇಕಲ್ಲ. ಈ ಸಮಸ್ಯೆಗಳು ಎಷ್ಟು ಎಂದು ಮಾನ್ಯ ಯಡಿಯೂರಪ್ಪನವರಿಗೂ ಗೊತ್ತಿದೆ. 3-4 ದಿವಸ ಅಥವಾ ಒಂದು ವಾರ ಎಂದು ಟೈಮ್ ಫಿಕ್ಸ್ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಅದನ್ನು ತಿಳಿದುಕೊಳ್ಳಬೇಕು. ತಿಂಗಳಿಗಿಂತ ಮೊದಲೇ ಆಗಬಹುದು. ಇನ್ನು ರೈತರಿಗೆ ನಾವು ವಿನಂತಿ ಮಾಡಿಕೊಳ್ಳುತ್ತೇವೆ. ಅವರ ಸಮಸ್ಯೆಯನ್ನು ಬಗೆಹರಿಸುತ್ತೇವೆ, ಸತ್ಯಾಗ್ರಹವನ್ನು ಮಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ದ.ಅ. ಗಮನಸೆಳೆಯುವ ಸೂಚನೆಗಳು

1. ವಿಷಯ:ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಡಿದ ಮಲೇರಿಯಾ ರೋಗ.

ಶ್ರೀ ಬಿ.ದಾಮಾನಾಥ ರೈ (ಬಂಟ್ವಾಳ ಕ್ಷೇತ್ರ):- ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯ ರೋಗವು ವ್ಯಾಪಕವಾಗಿ ಹರಡಿ ಅನೇಕ ಸಾವುಗಳಿಗೂ ಕೂಡ ಕಾರಣವಾಗಿದೆ. ಜನರು ಈ ಬಗ್ಗೆ ಭಯಭೀತರಾಗಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಡಾ.ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ದಿನ ಶೂನ್ಯ ವೇಳೆಯಲ್ಲಿ ಈ ಪ್ರಶ್ನೆ ಬಂದಂಥ ಸಂದರ್ಭದಲ್ಲಿ ನಾನು ಈ ಸದನದಲ್ಲಿ ಇರಲಿಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ಮೇಲ್ಮನೆಯಲ್ಲಿ ಪ್ರಶ್ನೆಗಳು ಇದ್ದುದರಿಂದ ಅಲ್ಲಿ ಇದ್ದೆ. ಅದಕ್ಕಾಗಿ ತಮ್ಮಲ್ಲಿ ವಿಷಾದವನ್ನು ವ್ಯಕ್ತಮಾಡುತ್ತಾ ಇವತ್ತು ಏನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮಲೇರಿಯ ರೋಗದ ಹೆಚ್ಚಳಿಕೆ ಬಗ್ಗೆ ಸರ್ಕಾರದ ಗಮನವನ್ನು ಸನ್ಮಾನ್ಯ ಸದಸ್ಯರು ಏನು ಸೆಳೆಯುತ್ತಿದ್ದಾರೆ ಅದರ ಬಗ್ಗೆ ವಿವರವನ್ನು ನೀಡುತ್ತೇನೆ.

ಮಂಗಳೂರು ಮಹಾನಗರ ಪಾಲಿಕೆಯು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1.1.95ರಿಂದ ಜುಲೈ 95 ರ ವರೆಗೆ ಒಟ್ಟು 3229 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದು 3211 ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ನೀಡಲಾಗಿದೆ. ಇಲಾಖೆಯ ದಾಖಲಾತಿಗಳಂತೆ 4 ರೋಗಿಗಳು ಮಾತ್ರ ಮಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಮರಣ ಹೊಂದಿರುವರೆಂದು ತಿಳಿದು ಬಂದಿರುತ್ತದೆ.

1.ಶ್ರೀ ಪ್ಲಾರ್ನೆನ್ಸ್ 92 ವರ್ಷ

2.ಶ್ರೀ ಶ್ಯಾಮದೇವಾಡಿಗ 52ವರ್ಷ

3.ಶ್ರೀ ಲಾಯನ್ಸ್ 52ವರ್ಷ

4.ಶ್ರೀ ಕೃಷ್ಣಪ್ಪ 35ವರ್ಷ

ಜಿಲ್ಲೆಗೆ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಕ್ಕೆ ಮಲೇರಿಯಾ ನಿರೋಧಕ ಗುಳಿಗೆಗಳು ಕ್ಲೋರೋಕ್ವಿನ್: 3.44 ಲಕ್ಷ ಮಾತ್ರೆಗಳು, ಪ್ರಿಮಾಕ್ವಿನ್: 25,000 ಮಾತ್ರೆಗಳು ಗಾಜಿನ